1000(1407) ಶ್ರೀ ಪದ್ಮನಾಭ ಕೊಟ್ಟಾರಿ.ಕೆ(ವಿಟ್ಲ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಟ್ಲ ಪಟ್ಟಣ ಪ್ರದೇಶದಲ್ಲಿ ಜನ ಸಂಚಾರಕ್ಕೆ ಉಪಯೋಗಿಸುವ ಬಸ್ಸುಗಳ ಸಂಖ್ಯೆಜಾಸ್ತಿ ಇದ್ದು ವ್ಯವಸ್ಥಿತವಾದ ಬಸ್ ನಿಲ್ದಾಣ ಇಲ್ಲದೇ ಇರುವುದನ್ನು ಸರಕಾರ ಗಂಭೀರವಾಗಿ ಪರಿಗಣಿಸಿಲ್ಲವೇ, ಪರಿಗಣಿಸಿದ್ದಲ್ಲಿ, ಆ ಕುರಿತು ಜರುಗಿಸಿದ ಕ್ರಮಗಳೇನು;

ಆ) ವ್ಯವಸ್ಥಿತ ಬಸ್ ನಿಲ್ದಾಣವನ್ನು ತ್ವರಿತವಾಗಿ ನಿರ್ಮಿಸಿಕೊಡಲು ಸಕಾಲಿಕ ಕ್ರಮವನ್ನು ಸರಕಾರ ಒರುಗಿಸುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಪರಿಗಣಿಸಿದೆ.

ಬಸ್ ನಿಲ್ದಾಣ ನಿರ್ಮಿಸಲುಯೋಜನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 2005–06ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಲಾಗಿದೆ.

ಆ) ಹೌದು.

1003(2486) ಶ್ರೀ ಪಾಟೀಲ್ ಡಿ.ಆರ್(ಗದಗ್) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನಿಲ, ಪೆಟ್ರೋಲ್ ಹಾಗೂ ಡಿಸೇಲ್ ಬಳಸುವ ವಾಹನಗಳ ಸಂಖ್ಯೆಎಷ್ಟು?(ಪ್ರತ್ಯೇಕವಾಗಿ ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ರಸ್ತೆಗೆ ಬಂದ ವಿವಿಧ ವಾಹನಗಳ ಸಂಖ್ಯೆ ಎಷ್ಟು; ಅವು ರಾಜ್ಯದ ಬೊಕ್ಕಸಕ್ಕೆ ನೀಡಿದ ತೆರಿಗೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)?

ಇ) ಸೈಕಲ್ ಹೊರತುಪಡಿಸಿ ರಾಜ್ಯದಲ್ಲಿರುವ ದ್ವಿಚಕ್ರ ವಾಹನಗಳು ಹಾಗೂ ತ್ರಿಚಕ್ರ ವಾಹನಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಈ) ಒಂದು ಪೆಟ್ರೋಲ್ ಬಳಕೆಯ ವಾಹನದಿಂದ ವಾಯುಮಾಲಿನ್ಯ ಕಾರಣವಾಗುವ ಪ್ರಮಾಣವೆಷ್ಟು ?

ಉ) ವಾಯುಮಾಲಿನ್ಯ ಕಡಿಮೆ ಮಾಡಲು ಸಾರಿಗೆ ಇಲಾಕೆಯು ಕೈಗೊಂಡಿರುವ ಕ್ರಮಗಳೇನು?

ಊ) ರಾಜ್ಯದಲ್ಲಿರುವ ಸರ್ಕಾರಿ ಒಡೆತನದ ಹಾಗೂ ನಿಗಮ ಮಂಡಳಿಗಳ ವಾಹನಗಳ ಸಂಖ್ಯೆ ಎಷ್ಟು ?

ಋ) ವಾಹನಕ್ಕೆ ಅಧಿಕ ವರ್ಷಗಳಾದಂತೆ ಅದರಿಂದ ಯಾವ ಪ್ರಮಾಣದಲ್ಲಿ ವಾಯುಮಾಲಿನ್ಯ ಹೆಚ್ಚಳವಾಗುವ ಪ್ರಮಾಣವೆಷ್ಟು?

ೠ) ವಾಯುಮಾಲಿನ್ಯ ತಡೆಗಟ್ಟಲು ಹಳೇ ವಾಹನಗಳ ಬಳಕೆಯನ್ನು ನಿಲ್ಲಿಸಲು ಸರ್ಕಾರವು ಕ್ರಮ ಕೈಗೊಳುವುದೇ?